**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 456/2022** **CW-1 PW-1**

**ಸಾಕ್ಷಿಯನ್ನು ದಿಃ 04.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಭಾಗ್ಯಲಕ್ಷ್ಮಿ |
| ಗಂಡನ ಹೆಸರುಃ | ಈಶ್ವರೇಗೌಡ |
| ವಯಸ್ಸುಃ | 48 ವರ್ಷ |
| ವೃತ್ತಿಃ | ಕೂಲಿ ಕೆಲಸ |
| ವಾಸ ಸ್ಥಳಃ | ಹಾಸನ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಮಗ. ಚಾಸಾ-3 ಮತ್ತು ಚಾಸಾ-4 ಗೊತ್ತು. ನನ್ನ ಗಂಡ 4 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಆರೋಪಿತರು ಮತ್ತು ನಮ್ಮ ನಡುವೆ ಸಿವಿಲ್ ದಾವೆ ನೆಡೆಯುತ್ತಿದೆ.

ದಿಃ 11.04.2022 ರಂದು ಬೆಳಗ್ಗೆ 9.30 ರಿಂದ 10.30 ರ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ನನ್ನ ಗಂಡನ ಊರಾದ ಡಿ ಕಾಳೇನಹಳ್ಳಿಗೆ ಹೋಗಿ ಆರೋಪಿತರ ಮನೆಯ ಒಳಗೆ ಹೋಗುತ್ತಿದ್ದಾಗ, ಆರೋಪಿತರು ನಮ್ಮನ್ನು ಮನೆಯ ಒಳಗೆ ಹೋಗಲು ಬಿಡದೇ ನಮ್ಮ ಮೇಲೆ ಗಲಾಟೆ ಮಾಡಿ ಇನ್ನೊಂದು ವೇಳೆ ಬಂದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸ್ಥಳ ಮಹಜರ್ ನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ 18.04.2022 ರ ಬೆಳಗ್ಗೆ 10.30 ರಿಂದ 11.00 ರ ಸಮಯದಲ್ಲಿ ಪೋಲೀಸರು ಸ್ಥಳಕ್ಕೆ ಬಂದು ನಾನೇ ಪೋಲೀಸರಿಗೆ ಸ್ಥಳವನ್ನು ತೋರಿಸಿದ್ದು, ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ.

ನಾನು ಪೋಲೀಸರಿಗೆ ಯಾವುದೇ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಜಿ ರವರಿಂದ**

ನನ್ನ ಮತ್ತು ನನ್ನ ಗಂಡನ ನಡುವೆ 2007 ರಿಂದ ವ್ಯಾಜ್ಯ ಇದೆ ಎಂದರೆ ಸರಿ. 2007 ರಿಂದ ನಾನು ನನ್ನ ಗಂಡ ಬೇರೆ ವಾಸವಿದ್ದೇವೆ ಎಂದರೆ ಸರಿ. ನನ್ನ ಗಂಡ ನನ್ನ ವಿರುದ್ಧ ದಾಂಪತ್ಯ ಪುನರ್ ಸ್ಥಾಪನೆಗೆ ಅರ್ಜಿ ಸಲ್ಲಿಸಿದ್ದು ಅದು ಪುರಸ್ಕತಗೊಂಡಿರುತ್ತದೆ ಎಂದರೆ ಸರಿ. ಅದಾದ 1 ವರ್ಷದ ನಂತರ ನಾನು ನನ್ನ ಗಂಡನ ಜೊತೆ ಬಾಳುವೆ ನಡೆಸದ ಕಾರಣ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ವಿಚ್ಛೇದನ ಅರ್ಜಿ ಪುರಸ್ಕತಗೊಂಡಿರುತ್ತದೆ ಎಂದರೆ ಸರಿ. ನಂತರ ನಾನು ವಿಭಾಗಕ್ಕಾಗಿ ದಾವೆ ಹೂಡಿದ್ದೇನೆ ಎಂದರೆ ಸರಿ. 2007 ರಿಂದ ನಾನು ಹಾಸದಲ್ಲಿ ವಾಸವಿದ್ದೇನೆ ಎಂದರೆ ಸರಿ. 2020 ರಲ್ಲಿ ನನ್ನ ಗಂಡ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅಂತ್ಯಸಂಸ್ಕಾರಕ್ಕೆ ಮತ್ತು ತಿಥಿ ಕಾರ್ಯಕ್ಕೆ ನಾನು ಹೋಗಿಲ್ಲ ಎಂದರೆ ಸಾಕ್ಷಿ ತಿಥಿ ಕಾರ್ಯಕ್ಕೆ ಹೋಗಿದ್ದೆ ಎನ್ನುತ್ತಾರೆ. ಆರೋಪಿಗಳು ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸರಿ. ನನ್ನ ಗಂಡ ಸಹ ಒಟ್ಟಿಗೆ ಇದ್ದರು ಎನ್ನುತ್ತಾರೆ.

ದಿಃ 11.04.2022 ರಂದು ನನ್ನ ಗಂಡನ ಮನೆಗೆ ಬೆಳಗ್ಗೆ 10.30 ಕ್ಕೆ ಹೋಗಿರುತ್ತೇನೆ. ನನ್ನ ಗಂಡನ ಪ್ರತ್ಯೇಕ ಮನೆ ಇಲ್ಲ ಎಂದರೆ ಎಲ್ಲರೂ ಒಟ್ಟಿಗೆ ವಾಸವಿದ್ದರು ಎನ್ನುತ್ತಾರೆ. ಆ ದಿನ ಆರೋಪಿತರ ಮನೆ ಬಳಿ ಹೋಗಿ ನ್ಯಾಯಾಲಯದಲ್ಲಿರುವ ಕೇಸನ್ನು ರಾಜೀ ಮಾಡಿಕೊಳ್ಳಿ ಎಂದು ಆರೋಪಿತರ ಮೇಲೆ ನಾವೇ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ವಿರುದ್ಧ ಆರೋಪಿತರು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ನಾವೇ ಗಲಾಟೆ

ಮಾಡಿದ್ದರಿಂದ ನಮ್ಮ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅವರೇ ನಮ್ಮ ಮೇಲೆ ಗಲಾಟೆ ಮಾಡಿರುತ್ತಾರೆ ಎನ್ನುತ್ತಾರೆ. ನಿಪಿ–1 ರ ಒಕ್ಕಣೆಯನ್ನು ನಾನೇ ಬರೆಸಿರುತ್ತೇನೆ. ಅದರಲ್ಲಿ ಗಲಾಟೆ ವಿಚಾರವಾಗಿ ಬರೆಸಿರುತ್ತೇನೆ.

ನಿಪಿ–2 ರಲ್ಲಿ ಸ್ಥಳ ಮಹಜರ್ ಬಗ್ಗೆ ಬರೆಯಲಾಗಿದೆ. ಪೋಲೀಸರು ಆ ದಿನ ಸ್ಥಳಕ್ಕೆ ಬಂದಿಲ್ಲ ಮತ್ತು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ನಡುವೆ ಮೊದಲಿನಿಂದ ವೈಶ್ಯಮ್ಯ ಇರುವುದರಿಂದ ನಾವೇ ಅವರ ಗಲಾಟೆ ಮಾಡಿ ಈ ದೂರನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**